ಸರ್ಕಾರಿ ಮುದ್ರಣಾಲಯದವರಿಂದ ಆದ ಕಾಮಗಾರಿಗಳ ಪ್ರಮಾಣ

೩೨೭ ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ)ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಸರ್ಕಾರಿ ಮುದ್ರಣಾಲಯದಲ್ಲಿ ಹಾಲಿ ಇರುವ ಅಧಿಕಾರಿ ಬರಮಂ ಮೊದಲಂ ಹೊರಗಡೆ ಮುದ್ರಣಾಲಯದಿಂದ ಆಗುತ್ತಿದ್ದ ಕೆಲಸವೆಷ್ಟು, ಹಾಗೂ ಹಣದ ಪೊತ್ತವೆಷ್ಟು,

ಆ)೧೯೮೦-೮೧ರಲ್ಲಿ ಸರ್ಕಾರಿ ಮುದ್ರಣಾಲಯದಿಂದ ಖಾಸಗಿ ಮುದ್ರಣಾಲಯಗಳಿಗೆ ಎಷ್ಟು ಲಕ್ಷ ರೂ. ಕೆಲಸ ಕೊಡಲಾಗುತ್ತಿತ್ತು,

ಇ) ೧೯೮೫-೮೬ ಹಾಗೂ ೧೯೮೬ರ ಸಾಲುಗಳಲ್ಲಿ ಎಷ್ಟು ಪೊತ್ತದ ಕೆಲಸ ಹೊರಗಡೆ ಮುದ್ರಣಾಲಯಗಳಿಗೆ ಕೊಡಲಾಗಿದೆ

ಈ) ೧೯೮೦-೮೧, ೧೯೮೫-೮೬ ಮತ್ತು ೧೯೮೬-೮೭ನೇ ಸಾಲುಗಳಲ್ಲಿ ಇದ್ದ ಒಟ್ಟು ನೌಕರರ ಸಂಖ್ಯೆ ಎಷ್ಟು ಹಾಗೂ ನೌಕರರು ಸರಿಯಾದ ಸಮಯಕ್ಕೆ ಹಾಜರಾಗುತ್ತಿದ್ದಾರೆಯೇ,

ಉ) ಹಾಗೆ ಕೆಲಸಕ್ಕೆ ಸರಿಯಾಗಿ ಬರದಿದ್ದ ನೌಕರರ ಮೇಲೆ ಸರ್ಕಾರದವರು ಕೈಗೊಂಡ ಕ್ರಮಗಳೇನು,

ಊ) ಹೊರ ಮುದ್ರಣಾಲಯಗಳಿಗೆ ಎಷ್ಟು ಟನ್ ಕಾಗದ ಕೊಡಲಾಗಿದೆ, ಹಾಗೂ ಅದರಲ್ಲಿ ಹಾಳಾದ ಕಾಗದ ಎಷ್ಟು ವಾಪಸ್ಸು ಬಂದಿರುತ್ತದೆ,

ಋ) ಒಂದು ಸರದಿಗೆ ೭೦೬ ಕೆಲಸಗಾರರು ಇರುವುದು ನಿಜವೇ,

ಹಾಗೂ ಸರ್ಕಾರಿ ಮುದ್ರಣಾಲಯದಲ್ಲಿ ಕೆಲಸ ಮಾಡುವ ನೌಕರರ ಸಂಖ್ಯೆ ಎಷ್ಟು ?

ಶ್ರೀ ಎಂ. ರಘುಪತಿ ಮಾನ್ಯ ಶಿಕ್ಷಣ ಸಚಿವರು.—

ಅ) (೧೯೭೯-೮೦ರಲ್ಲಿ) ಕೆಲಸದ ಪ್ರಮಾಣ

೧) ಅಕ್ಷರ ಜೋಡಣೆ ೫೦ ಪುಸ್ತಕಗಳು

೨) ಬೌಂಡ್ ಪುಸ್ತಕಗಳು ೧.೫೬ ಲಕ್ಷ ಪ್ರತಿ

೩) ನಮೂನೆ: ಕವರ್ ೧೩.೨ ಲಕ್ಷಪ್ರತಿ

ಪೊತ್ತ ರೂ. ೩ ೭೫ ಲಕ್ಷ

ಆ) ಪೊತ್ತ ರೂ. ೨.೦೩ ಲಕ್ಷ

ಇ) ೧೯೮೩-೮೪ರಲ್ಲಿ ಪೊತ್ತ ರೂ. ೪.೯೧ ಲಕ್ಷ
೧೯೮೪-೮೫ರಲ್ಲಿ ಪೊತ್ತ ರೂ. ೮.೫೬ ಲಕ್ಷ

ಈ) ೧೯೮೦-೮೧ ರಲ್ಲಿ ೧೫೬೯ ಜನ
೧೯೮೩-೮೪ ರಲ್ಲಿ ೧೫೧೭ ಜನ
೧೯೮೪-೮೫ ರಲ್ಲಿ ೧೪೭೪ ಜನ

ಹೌದು. ಸರಿಯಾದ ಸಮಯಕ್ಕೆ ಹಾಜರಾಗುತ್ತಿದ್ದಾರೆ.

ಉ) ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುತ್ತಿದೆ.

ಊ) ೧೯೮೦ರಿಂದ ೧೯೮೫ರ ವರೆಗೆ ಖಾಸಗಿ ಮುದ್ರಣಾಲಯಗಳಿಗೆ ಸುಮಾರು ೧೪ ಟನ್ ಕಾಗದ ಕೊಡಲಾಗಿದೆ. ಮುದ್ರಣ ಕಾರ್ಯಕ್ಕೆ ಬೇಕಾದಷ್ಟು ಮಾತ್ರ ಕಾಗದ ಸರಬರಾಜು ಮಾಡುವ ಪದ್ಧತಿ ಇರುವುದರಿಂದ ಹಾಳಾದ ಕಾಗದ ಹಿಂದಕ್ಕೆ ಪಡೆಯುವ ಪ್ರಶ್ನೆ ಉದ್ಭವಿಸುವುದಿಲ್ಲ.

ಋ) ಇಲ್ಲ.

ಈಗಿರುವ ಪ್ರಕಾರ ಪಾಳಿವಾರು (ಸರದಿ) ತಾತ್ಕಾಲಿಕ ನೌಕರರ ಸಂಖ್ಯೆ ವಿವರ ಹೀಗಿದೆ.—

ಮೊದಲನೇ ಪಾಳಿ	—	೬೭೭
ಎರಡನೇ ಪಾಳಿ	—	೬೭೪
ಸಾಮಾನ್ಯ ಪಾಳಿ	—	೯೬
ರಾತ್ರಿ ಪಾಳಿ	—	೨೬
ಒಟ್ಟು		೧೪೭೩

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೇ, ಇವರ ಉತ್ತರ ಹೇಗಿದೆ ಎಂದರೆ, ನಾವು ಗಣಪತಿ ಹೇಗಿದ್ದಾನೆಂದು ಕೇಳಿದರೆ, ಅವರ ಅಪ್ಪನಶಿವನ ಸುದ್ದಿ ಹೇಳಿದ್ದಾರೆ.ದಿನಾಂಕ ೯–೧೨–೮೫ ರಂದೂ ಮ್ಯಾನೇಜಿಂಗ್ ಡೈರಕ್ಟರ್‌ರವರು ಭೇಟಿ ಕೊಟ್ಟಾಗ ೭೦೬ ಮಂದಿ ಇರಬೇಕಾಗಿತ್ತು. ಆದರೆ ಬರೀ ೨೦ಮಂದಿಹಾಜರಿದ್ದರು ಎಂದು ಕೊಟ್ಟಿದ್ದಾರೆ. ಆ ಮೇಲೆ ೧೦ನೇ ತಾರೀಖು ಬೆಳಿಗ್ಗೆ ೬ ಗಂಟೆಗೆ ಸೇರ ಬೇಕಾದಜನ ೮ ಗಂಟೆಗೆ ಬರೀ ೩೨ ಜನ ಬಂದಿದ್ದಾರೆ. ೬೭೪ ಜನಕೆಲಸಗಾರರಿಗೆ ಬರೀ ೩೨ ಮಂದಿ ಇದ್ದಾರೆ.ಆ ದಿನ ಗಡಿಯಾರ ನಿಲ್ಲಿಸಿ, ಈ ರೀತಿ ಮಾಡಿದ್ದಾರೆ, ಈ ಬಗ್ಗೆ ಅವರು ಹೇಳುವುದು ನಿಜವೋ, ನೀವು ಹೇಳುವುದು ನಿಜವೋ ?

ಶ್ರೀ ಎಂ. ರಘುಪತಿ.—ಮಾಹಿತಿ ತರಿಸಿಕೊಂಡು ಎನ್‌ಕ್ವೈರಿ ಮಾಡಿಸಿ, ಯಾರು ತಪ್ಪಿತಸ್ಥರು ಇದ್ದಾರೆ ಅವರಿಗೆ ಶಿಕ್ಷೆ ಮಾಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಅಧ್ಯಕ್ಷರೇ, ಯಾರಾದರೂ ಒಬ್ಬರು ಬರದೇ ಹೋದರೆ ಸಸ್ಪೆಂಡ್ ಮಾಡುತ್ತಾರೆ, ಆದೇ ೭೦೦ ಜನ ಬರದೇ ಇದ್ದಾಗ ಏನು ಮಾಡುತ್ತಾರೆ ? ನನಗೆ ಬಂದಿರತಕ್ಕ ಈ ವರದಿಗೆ ನಿಮ್ಮ ಮುದ್ರಣಾಲಯದವರೇ ಸಹಿ ಮಾಡಿದ್ದಾರೆ. ನಿಮ್ಮ ಮ್ಯಾನೇಜಿಂಗ್ ಡೈರಕ್ಟರ್ ಸಹಿ ಇದೆ.

ಶ್ರೀ ಎಂ. ರಘುಪತಿ.—ಸ್ಪೆಸಿಫಿಕ್ ಆಗಿ ಕೇಳಿದರೆ ನಾನು ಹೇಳುತ್ತೇನೆ. ನಾವು ಎಲ್ಲವನ್ನೂ ಸಂಪೂರ್ಣವಾಗಿ ನೋಡುತ್ತೇವೆ. ಆದುದರಿಂದ ತಾವು ಸ್ಪೆಸಿಫಿಕ್ ಆಗಿ ಕೇಳಿ. ಯಾರು ತಪ್ಪಿತಸ್ಥರು ಅವರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಕಾನಡೆಯವರೇ, ಎನ್‌ಕ್ವೈರಿ ಮಾಡಿಸುತ್ತೇನೆಂದು ಸಚಿವರು ಹೇಳಿದ್ದಾರೆ.

ಶ್ರೀ ಗೋಪಾಲ ಮುಕುಂದ ಕಾನಡೆ.—೭೦೬ ಮಂದಿ ಕೆಲಸಕ್ಕೆ ಬರುವುದಕ್ಕೆ ಬರೀ ೨೨ ಮಂದಿ ಹಾಜರಾಗಿದ್ದಾರೆ. ಈ ವಿಚಾರವನ್ನು ಗುಟ್ಟಾಗಿ ಮಾತನಾಡುವುದಕ್ಕೆ ನನಗೆ ಬರುವುದಿಲ್ಲ. ಇದು ನಿಮ್ಮ ಆಫೀಸಿಗೆ ಸಂಬಂಧಪಟ್ಟಿದ್ದು. ೯–೧೨–೮೫ರಂದು ಇದು ಆಗಿದೆ, ಇದಕ್ಕಿಂತ ಮೊದಲು ೨೩–೧೦–೮೫ರಂದೇ ಕರೆದು ಹೇಳಿದ್ದಾರೆ. ಇದು ಒಂದು ವರ್ಷದ ಕಥೆ.

ಶ್ರೀ ಎಂ. ರಘುಪತಿ.—ನಾನು ಈಗಾಗಲೇ ಹೇಳಿದ್ದೇನೆ. ಯಾವುದೇ ಇರಲಿ ಎನ್‌ಕ್ವೈರಿ ಮಾಡಿಸುತ್ತೇನೆ. ಯಾರೇ ತಪ್ಪಿತಸ್ಥರು ಇರಲಿ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರೇ.—ಮಂತ್ರಿಗಳು ಎನ್‌ಕ್ವೈರಿ ಮಾಡಿಸುತ್ತೇನೆಂದೂ, ಆಕ್ಷನ್ ತೆಗೆದುಕೊಳ್ಳುತ್ತೇನೆಂದೂ ಹೇಳಿದ್ದಾರೆ. ತಾವು ಬೇಕಾದರೆ ಬರೆದು ಕಳುಹಿಸಿ. ಅವರು ಕೊಟ್ಟಿಂಥ ಭರವಸೆ ಏನಿದೆ, ಅದು ಇಂಪ್ಲಿಮೆಂಟ್ ಆಗುತ್ತದೋ, ಇಲ್ಲವೋ ಎಂಬುದನ್ನು ನೋಡುತ್ತೇನೆ. The Hon'ble Minister has given a clear-cut assurance, I will look into it.

ಶ್ರೀ ಗೋಪಾಲ ಮುಕುಂದ ಕಾನಡೆ.—೧೯೪೪–೪೫ರಲ್ಲಿ ೮.೫೬ ಲಕ್ಷ ರೂಪಾಯಿಂಗಳ ಕೆಲಸವನ್ನು ಹೊರಗಡೆ ಕೊಟ್ಟಿರುತ್ತಾರೆ. ಅಂದರೆ ಇಲ್ಲಿಯವರೆಗೆ ಕೆಲಸ ಮಾಡುವುದಕ್ಕೆ ಬರುವುದಿಲ್ಲವೇ ? ಕೆಲಸವನ್ನು ಹೊರಗಡೆ ಏತಕ್ಕೆ ಕೊಡುತ್ತಾರೆ ?

ಶ್ರೀ ಎಂ. ರಘುಪತಿ.—ಈ ವಿಚಾರವನ್ನು ಸಿ.ಒ.ಡಿ.ಗೆ ವಹಿಸುತ್ತೇನೆ. ಸಿ ಒ.ಡಿ. ಯವರು ತನಿಖೆ ಮಾಡುತ್ತಾರೆ.

ಶ್ರೀ ಗೋಪಾಲ ಮುಂಕುಂದ ಕಾನಡೆ.—ಇದೂ ಕೂಡ ಆದಷ್ಟು ಬೇಗ ಆಗುವುದಿಲ್ಲ. ಸಿ.ಬಿ.ಐ. ತನಿಖೆ ಮಾಡಿಸುತ್ತೀರಾ ?

ಶ್ರೀ ಎಂ. ರಘುಪತಿ.—ನಾನಂ ಇದಕ್ಕಿಂತ ಜಾಸ್ತಿ ಹೇಳುವುದಿಲ್ಲ.

ಶ್ರೀ ಗೋಪಾಲ ಮುಂಕುಂದ ಕಾನಡೆ.—ಲೋಕಾಯುಕ್ತಕ್ಕೆ ಒಪ್ಪಿಸುತ್ತೀರಾ ?

ಶ್ರೀ ಎಂ. ರಘುಪತಿ.—ಲೋಕಾಯುಕ್ತಕ್ಕೆ ನಾನು ಒಪ್ಪಿಸುವುದಿಲ್ಲ. ನೀವು ಅಪ್ಲೈ ಮಾಡಬೇಕು.

ಅಧ್ಯಕ್ಷರು.—ಸಿ.ಒ.ಡಿ. ತನಿಖೆ ಮಾಡಿಸುತ್ತೇನೆಂದು ಹೇಳಿದ್ದಾರೆ, ಬಿಡಿ. ಇದನ್ನು ಆದಷ್ಟು ಬೇಗ ಮಾಡಿಸಿ ಎಂದು ಹೇಳುತ್ತೇನೆ.

ಶ್ರೀ ಎಂ. ರಘುಪತಿ.—ಸರ್ಕಾರಿ ಪ್ರೆಸ್‌ನಲ್ಲಿ ಯಾರೂ ರಾಜಕೀಯ ಮಾಡುವುದಿಲ್ಲ. ತಪ್ಪಿತಸ್ಥರು ಯಾರೇ ಇರಲಿ, ಸಿ.ಒ.ಡಿ. ತನಿಖೆ ಮಾಡಿಸುತ್ತೇನೆ. ಯಾರಿಗೂ ರಕ್ಷಣೆ ಕೊಡುವುದಿಲ್ಲ. ಲೋಕಾಯುಕ್ತಕ್ಕೆ ಬಂದಾಗ, ನಾನು ಎಲ್ಲಾ ಕಡತವನ್ನು ಕೊಡುತ್ತೇನೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಕಾನಡೆಯವರು ಕೇಳಿರುವ ಪ್ರಶ್ನೆ ಬಹಳ ಜವಾಬ್ದಾರಿಯುತವಾದ ಪ್ರಶ್ನೆ. ಗೌರ್ನಮೆಂಟ್ ಪ್ರೆಸ್‌ನಲ್ಲಿ ಅಷ್ಟು ಜನ ನೌಕರರೂ ಇದ್ದರೂ ಸಹ, ಹೊರಗಡೆ ಏಕೆ ಪ್ರಿಂಟ್ ಮಾಡಿಸುತ್ತೀರಿ ಎಂದು ಕೇಳಿದ್ದಾರೆ. ಇವನ್ನು ಸರಿಪಡಿಸದೇ ಹೊರಗಡೆ ಪ್ರಿಂಟ್ ಮಾಡಿಸಿದರೆ, ಸರ್ಕಾರಕ್ಕೆ ಲಾಸ್ ಆಗುತ್ತದೆ. ಇದರಲ್ಲಿ ಏನೋ ವ್ಯವಹಾರ ನಡೆದಿದೆ ಎಂಬ ಅನುಮಾನವನ್ನು ಅವರು ವ್ಯಕ್ತಪಡಿಸಿದ್ದಾರೆ.

ಶ್ರೀ ಎಂ. ರಘುಪತಿ.—ಆ ಅನುಮಾನ ಪರಿಹಾರ ಆಗಬೇಕಾದರೆ ಸಿ.ಒ.ಡಿ. ಎನ್‌ಕ್ವೈರಿ ಮಾಡಿಸುತ್ತೇನೆಂದು ಹೇಳಿದ್ದೇನೆ. ಇನ್ನು ಇದಕ್ಕಿಂತ ಹೆಚ್ಚಿಗೆ ಹೇಳುವುದಕ್ಕಾಗುತ್ತದೆಯೇ.

ಶ್ರೀ ಗೋಪಾಲ ಮುಂಕುಂದ ಕಾನಡೆ.—ಮೈಸೂರಿನಲ್ಲಿ, ಕೆಲವು ಮಂದಿ ಹರಿಜನರಿಗೆ ಹೊಡೆದು ಗಲಾಟೆ ಮಾಡಿದ್ದಾರೆ, ಇದರ ಬಗ್ಗೆ ಏನು ಮಾಡಿದ್ದೀರಿ ?

ಶ್ರೀ ಎಂ. ರಘುಪತಿ.—ಈಗ ಇದನ್ನು ನನ್ನ ಗಮನಕ್ಕೆ ತಂದಿದ್ದಾರೆ, ಇದನ್ನು ಎನ್‌ಕ್ವೈರಿ ಮಾಡಿಸುತ್ತೇನೆ.

ಶ್ರೀ ಗೋಪಾಲ ಮುಂಕುಂದ ಕಾನಡೆ.—ಇದನ್ನೂ ಸಿ.ಒ.ಡಿ.ಗೆ ಹಾಕುತ್ತೀರಾ ?

ಶ್ರೀ ಎಂ. ರಘುಪತಿ.—ನೀವು ನನ್ನ ಮೇಲೆ ನಂಬಿಕೆ ಇಡಿ.

ಅಧ್ಯಕ್ಷರು.—ಕೊಟ್ಟ ಭರವಸೆಯನ್ನು ಇಂಪ್ಲಿಮೆಂಟ್ ಮಾಡದೇ ಹೋದರೆ ಬಿಡುವುದಿಲ್ಲ.

ಶ್ರೀ ಎಂ. ರಘುಪತಿ.—ಸಿ.ಒ.ಡಿ.ಗೆ ರೆಫರ್ ಮಾಡಿಸುತ್ತೇನೆಂದು ಹೇಳಿದ್ದೇನೆ.

ಅಧ್ಯಕ್ಷರು.—ಇದರ ಬಗ್ಗೆ ತಾವೂ ಮಂತ್ರಿ ಇವರೂ ಕೂಡಿ ಡಿಸ್‌ಕಸ್ ಮಾಡಿ. ತಾವೂ ಗುಂಡೂ ಇಂಟರೆಸ್ಟ್‌ನಲ್ಲಿ ಮಾತನಾಡಿದ್ದೀರಿ, ಅವರೂ ಗುಡ್ ಇಂಟರೆಸ್ಟ್‌ನಲ್ಲಿ ಮಾತನಾಡಿದ್ದಾರೆ.

ಚುಕ್ಕೆ ಪ್ರಶ್ನೆ ನಂ. ೧೧೭ (೩೪೨)

(ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)